


## ಬ್ಯಾಟರಿ ಡಾಕ್ಟರ್

ಕೆಲವು ಅಪ್ಲಿಕೇಶನ್‌ಗಳು ಮೊಬೈಲ್‌ನ ಬ್ಯಾಟರಿಯನ್ನು ಜಾಸ್ತಿ ಎಳೆಯುತ್ತವೆ. ಈ ಬ್ಯಾಟರಿ ಡಾಕ್ಟರ್ ಎಂಬ ಅಪ್ಲಿಕೇಶನ್ ಯಾವ ಅಪ್ಲಿಕೇಶನ್‌ಗಳು ಎಷ್ಟೆಷ್ಟು ಬ್ಯಾಟರಿ ಬಳಸುತ್ತವೆ ಎಂಬುದನ್ನು ತೋರಿಸಿ, ಅವುಗಳನ್ನು ತೆಗೆದು ಹಾಕಲು ಶಿಫಾರಸ್ಸು ಮಾಡುತ್ತದೆ. ಇದು ಬಳಕೆದಾರರಲ್ಲಿ ಬ್ಯಾಟರಿ ಬಳಕೆಯ ಬಗ್ಗೆ ತಿಳಿವಳಿಕೆ ನೀಡುತ್ತದೆ. ಬ್ಯಾಟರಿಯನ್ನು ಯಾವ ಮಟ್ಟದವರೆಗೆ ಚಾರ್ಜ್ ಮಾಡಬೇಕು, ಹೀಗೆ ಮಾಡಿದರೆ ಚಾರ್ಜ್ ಇಲ್ಲದೆ ಪರದಾಡಬೇಕಾದ ಅಗತ್ಯವೂ ಇರುವುದಿಲ್ಲ ಎಂಬುದನ್ನು ತಿಳಿಸುತ್ತದೆ.




## ಫೈಂಡಿಂಗ್ ರೋವರ್

ನಿಮ್ಮ ಮುದ್ದಿನ ನಾಯಿ ಕಳೆದು ಹೋಗಿದೆಯಾ? ಹಾಗಿದ್ದರೆ ಈ ಅಪ್ಲಿಕೇಶನ್ ಬಳಸಬಹುದು. ಇದು ಫೇಷಿಯಲ್ ರಿಕಗ್ನಿಶನ್ ತಂತ್ರಜ್ಞಾನದ ಮೇಲೆ ಅಭಿವೃದ್ಧಿಗೊಂಡಿದೆ. ಪ್ರತಿಯೊಂದು ನಾಯಿಯ ಮುಖದ ಮೇಲಿನ ಭಾವನೆಗಳು ಇನ್ನೊಂದು ನಾಯಿಗಿಂತ ಭಿನ್ನವಾಗಿರುತ್ತದೆ. ಇದನ್ನು ಮೊದಲೇ ಕ್ಯಾಮೆರಾ ಮೂಲಕ ಸೆರೆ ಹಿಡಿದು, ನಾಯಿ ಮರಿ ಕಳೆದು ಹೋದರೆ ಅಪ್‌ಲೋಡ್ ಮಾಡಿದರಾಯ್ತು. ಪೆಟ್‌ಮ್ಯಾಚ್ ಎಂಬ ತಂತ್ರಜ್ಞಾನದ ಮೂಲಕ ಆ ನಾಯಿಯ ವಿಶೇಷ ನಡವಳಿಕೆಯನ್ನು ಸೆರೆ ಹಿಡಿಯುವ ಅಪ್ಲಿಕೇಶನ್ ಇದು.

## ವೈನ್

ಟ್ವಿಟ್ಟರ್‌ನ ಈ ವಿಡಿಯೊ ಅಪ್ಲಿಕೇಶನ್‌ನಿಂದ ಉದಯೋನ್ಮುಖ ನಟ–ನಟಿಯರು, ಹವ್ಯಾಸಿಗರು ತಮ್ಮ ಸೃಜನಶೀಲತೆಯನ್ನು ತೋರಿಸಬಹುದು. ಯೂಟ್ಯೂಬ್‌ನಂತೆ 6 ಸೆಕೆಂಡುಗಳ ಕ್ಲಿಪಿಂಗ್ ಹಾಕಿ ತಮ್ಮ ಸೃಜನಶೀಲ ಚಟುವಟಿಕೆಗಳು, ಪ್ರತಿಭೆಯನ್ನು ತೋರಿಸಬಹುದು. ಇದರಲ್ಲಿ ಈಗಾಗಲೇ 13 ದಶಲಕ್ಷ ನೋಂದಾಯಿತ ಬಳಕೆದಾರರಿದ್ದಾರೆ.




## ಹೈಟೇಲ್

ದೊಡ್ಡ ದೊಡ್ಡ ಫೈಲುಗಳನ್ನು ಅಟ್ಯಾಚ್ ಮಾಡಿ ಕಳುಹಿಸಿದ ಇ–ಮೇಲ್ ಬೇಕಾದವರನ್ನು ತಲುಪುವುದೇ ಇಲ್ಲ. ಈ ಸಮಸ್ಯೆ ಪರಿಹರಿಸಲು ಹೈಟೇಲ್ ಎಂಬ ಉಚಿತ ಅಪ್ಲಿಕೇಶನ್ ಆ್ಯಂಡ್ರಾಯ್ಡ್ ಮತ್ತು ಐಫೋನ್‌ಗಳಲ್ಲಿ ದೊಡ್ಡ ಫೈಲ್‌ಗಳನ್ನು ಅಪ್‌ಲೋಡ್ ಮಾಡಲು ನೆರವು ನೀಡುತ್ತದೆ. ಇದರಿಂದ ಸರ್ವರ್ ಮೇಲೆ ಒತ್ತಡ ಬೀಳುವುದಿಲ್ಲ. ಈ ಅಪ್ಲಿಕೇಶನ್ ಒಳಗೇ ಖಾತೆ ತೆರೆದು ನಂತರ ಹೈಟೇಲ್ ಹೋಂಸ್ಕ್ರೀನ್‌ನಲ್ಲಿ ಫೈಲ್ ಅಟ್ಯಾಚ್ ಮಾಡಬಹುದು. ಮೈ ಫೋಲ್ಡರ್, ಫೋಟೊ ಲೈಬ್ರರಿ ಅಥವಾ ಕ್ಯಾಮೆರಾ ಫೋಲ್ಡರ್‌ಗಳಿಂದಲೂ ಫೈಲ್ ಅಪ್‌ಲೋಡ್ ಮಾಡಬಹುದು. ನಂತರ ಯಾರಿಗೆ ಕಳಿಸಬೇಕೋ ಅವರ ಇ–ಮೇಲ್ ವಿಳಾಸ ಟೈಪ್ ಮಾಡಿ. ಈ ಅಪ್ಲಿಕೇಶನ್‌ನಲ್ಲಿ ಡಿಜಿಟಲ್ ಆಗಿ ಸಹಿ ಹಾಕುವ ಅವಕಾಶವೂ ಇದೆ.




■ ಎಸ್. ತುಂಬೆ